ಸಾಕ್ಷಿಯು ದಿನಾಂಕ- 15-07-2025 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ದೂರುದಾರರಾದ ಶ್ರೀ ಎಸ್.ಅರ್.ಎಸ್.ಜೆ ರವರಿಂದ -

ಸಾಕ್ಷಿಗೆ ಸಿಸಿ ನಂಃ 2367/2021 ಪ್ರಕರಣದಲ್ಲಿ ಸದರಿ ಸಾಕ್ಷಿ ತನ್ನ ಪರವಾಗಿ ನುಡಿದ ಸಾಕ್ಷ್ಯ ವಿಚಾರಣೆಯನ್ನು ಹಾಗೂ ಪಾಟೀ ಸವಾಲಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯು 5 ಪುಟಗಳು ಇದ್ದ ಅವುಗಳನ್ನು ಒಟ್ಟಿಗೆ ನಿಪಿ-10 ಎಂದು ಗುರುತಿಸಲಾಯಿತು. ಕ್ರೈಂ ನಂಃ 10/2022 ಪ್ರಕರಣದಲ್ಲಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪೊಲೀಸ್‌ರಿಗೆ ನೀಡಿದ ಹೇಳಿಕೆಯನ್ನು ಸಾಕ್ಷಿಗೆ ಎದುರು ತೋರಿಸಿದಾಗ ಸಾಕ್ಷಿ ಅದನ್ನು ಒಪ್ಪಿರುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಸಿಸಿ ನಂಃ 2170/2021 ಪ್ರಕರಣದಲ್ಲಿ ಸದರಿ ಸಾಕ್ಷಿ ತನ್ನ ಪರವಾಗಿ ನುಡಿದ ಮುಖ್ಯ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲನ್ನು ಸಾಕ್ಷಿಗೆ ಎದುರು ತೋರಿಸಿದ್ದು, ಸಾಕ್ಷಿ ಅದನ್ನು ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಪಿ-12 ಎಂದು ಗುರುತಿಸಲಾಯಿತು. ಮೂಲ ದಾವಾ ನಂಃ 32/2024 ದಾವೆಯಲ್ಲಿ ಸಾಕ್ಷಿ ಸಲ್ಲಿಸಿದ ಲಿಖಿತ ಹೇಳಿಕೆ ಹಾಗೂ ಪ್ರಮಾಣ ಪತ್ರದ ದೃಡೀಕೃತ ನಕಲನ್ನು ಸಾಕ್ಷಿಗೆ ಎದುರು ತೋರಿಸಿದ್ದು, ಸಾಕ್ಷಿ ಅದನ್ನು ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಪಿ-13 ಎಂದು ಗುರುತಿಸಲಾಯಿತು.

ಸಾಮಾನ್ಯವಾಗಿ ಟ್ರಾನ್ಸಪೋರ್ಟ್ ವ್ಯವಹಾರದಲ್ಲಿ ಬಿಲ್ ಕೊಟ್ಟ 40 ರಿಂದ 60 ದಿನಗಳ ಒಳಗೆ ಫ್ಯಾಕ್ಟರಿಯವರು ಹಣದ ಪಾವತಿ ಮಾಡುತ್ತಾರೆ ಎಂದರೆ ಸರಿ. ನನ್ನ ಬಳಿ ವರ್ಕ್ ಆರಡರ್ ದಾಖಲೆ ಇಲ್ಲ, ಆದರೆ ಫ್ಯಾಕ್ಟರಿ ಜೊತೆ ನೆಡೆಸಿದ ಟ್ರಾನ್ಸಪೊರ್ಟ್ ವ್ಯವಹಾರದ ಬೇರೆ ದಾಖಲೆಗಳು ಇವೆ. ಅವುಗಳನ್ನು ಅವುಗಳನ್ನು ನಾನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಸಾಮಾನ್ಯವಾಗಿ ಲಾರಿ ಮಾಲೀಕರಿಗೆ ಡೀಸೆಲ್, ಟಯರ್ ಹಾಗೂ ಮಾಸಿಕ ಕಂತಿನ ಹಣದ ಖರ್ಚುಗಳು ಹೆಚ್ಚಾಗಿ ಇರುತ್ತವೆ ಎಂದರೆ ಸರಿ. ನನ್ನ ಬಳಿ ಇರುವ ಲ್ಯಾಂಡ್ ಲೂಸರ್ಸ್ ನ ಲಾರಿಗಳನ್ನು ಸದರಿ ಲ್ಯಾಂಡ್ ಲೂಸರ್ಸ್ ಸಾಲ ಮಾಡಿ, ಖರೀದಿಸಿರುತ್ತಾರೊ , ಇಲ್ಲವೊ ನನಗೆ ಗೊತ್ತಿಲ್ಲ. ನಾನು 2008 ನೇ ಇಸ್ವಿಯಿಂದ ಇಲ್ಲಿಯವರೆಗೆ ಲ್ಯಾಂಡ್ ಲೂಸರ್ಸ್ ರವರ ವಾಹನಗಳ ಟ್ರಾನ್ಸ್ ಪೋರ್ಟ್ ವ್ಯವಹಾರ ನಡೆಸುತ್ತೇನೆ ಎಂದರೆ ಸರಿ. ನಾನು ದೂರುದಾರರಿಂದ ಟಯರನ್ನು ಹಾಗೂ ಎ ಎಸ್ ಕೆ ಎಂಟರ್

ಪ್ರೈಸೆಸ್, ಅಲ್ಲನಗರ, ಗಿಣಿಗೆರೆ, ಕೊಪ್ಪಳ ಜಿಲ್ಲೆ ರವರಿಂದ ಡಿಸೇಲನ್ನು ನನ್ನ ಟ್ರಾನ್ಸ್ ಪೋರ್ಟ್ ವ್ಯಹವಾರದಲ್ಲಿ ಲಾರಿಗಳನ್ನು ನಡೆಸುತ್ತಿರುವವರಿಗೆ ಕೊಡಿಸುತ್ತಿದ್ದೆ ಎಂದರೆ ಸರಿಯಲ್ಲ. ಈ ರೀತಿ ದೂರುದಾರರಿಂದ ಟಯರನ್ನು ಖರೀದಿಸಿ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಲಾರಿ ನಡೆಸುತ್ತಿರುವವರಿಗೆ ಸದರಿ ದೂರುದಾರರಿಂದ ಹಣ ಕೊಡಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ದೂರುದಾರರಿಂದ ಟಯರನ್ನು ಖರೀದಿ ಮಾಡಿಲ್ಲ. ನನ್ನ ತುರ್ತು ಪರಿಸ್ಥಿತಿಯಲ್ಲಿ ದೂರುದಾರರು ಅವರ ಕುಟುಂಬದವರಿಂದ ಸಹ ಹಣ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ದೂರುದಾರರು ದೀಪ್ ಆಟೋ ಮೊಬೈಲ್ಸ್ ಅಂಡ್ ಟಯರ್ಸ ಅಂಡ್ ಎಮ್ ಆರ್ ಎಫ್ ಟಾಯರ್ಸ್ ಹಾಗೂ ಖಾನ್ ಟಯರ್ಸ್ ರವರಿಂದ ನನಗೆ ಟಯರ್ ಗಳನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. **2016** ನೇ ಇಸ್ವಿ ನಂತರ ದೂರುದಾರರು ಟಯರ್ ವ್ಯವಹಾರ ನಿಲ್ಲಿಸಿದ್ದರಿಂದ, ಸದರಿ ದೂರುದಾರರು ಪರಿಚಯ ಮಾಡಿಕೊಟ್ಟ ಖಾನ್ ಟಯರ್ಸ್ ರವರ ಜೊತೆ ನಾನು ನೇರವಾಗಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಯುನಿಯನ್ ಬ್ಯಾಂಕ್ ಹಾಗೂ ಸುಕೋ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಇವರೆಡು ಬ್ಯಾಂಕ್ ಗಳಲ್ಲಿ ಹೊರೆತುಪಡಿಸಿ, ಬೇರೆ ಬ್ಯಾಂಕ್ ಗಳಲ್ಲಿ ನನ್ನ ಖಾತೆ ಇಲ್ಲ. ಈಗ ಇರುವ ಯುನಿಯನ್ ಬ್ಯಾಂಕ್ ಅಂದರೆ ಮೊದಲಿಗೆ ಇದ್ದ ಕಾರ್ಪೊರೇಷನ್ ಬ್ಯಾಂಕ್ ನಲ್ಲಿ ನನ್ನ ಹೌಸಿಂಗ್ ಲೋನ್, ಓಡಿ, ಮಾರ್ಟಗೇಜ್ ಲೋನ್ ಇರುತ್ತದೆ. **2012** ನೇ ಇಸಿವಯಲ್ಲಿ ನಾನು ರೂ. 7 ಲಕ್ಷ ಹೌಸಿಂಗ್ ಲೋನ್ ಪಡೆದಿರುತ್ತೇನೆ. **2014** ನೇ ಇಸ್ವಿಯಲ್ಲಿ ರೂ. 7 ಲಕ್ಷ ಓಡಿ ಸಾಲ ಪಡೆದಿರುತ್ತೇನೆ. **2025** ನೇ ಇಸ್ವಿಯಲ್ಲಿ ರೂ. 25 ಲಕ್ಷ ಮಾರ್ಟ್ ಗೇಜ್ ಲೋನ್ ಪಡೆದಿರುತ್ತೇನೆ. ನಾನು ಟ್ರನ್ಸ್ ಪೋರ್ಟ್ ವ್ಯವಹಾರಕ್ಕೆ ಸಂಬಂದಪಟ್ಟಂತೆ ಟಾಟಾ ಫೈನಾನ್ಸ್ ಹಾಗೂ ಮಹೀಂದ್ರ ಫೈನಾನ್ಸ ನಲ್ಲಿ ಸಾಲ ಪಡೆದಿರುತ್ತೇನೆ. **2017** ನೇ ಇಸ್ವಿಯಲ್ಲಿ ನಾನು ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಸೆಕೆಂಡಕ್ ಹ್ಯಾಂಡ್ ವೇಹಿಕಲ್ ಗೆ ಸಾಲ ಪಡೆದಿರುತ್ತೇನೆ. **2013** ನೇ ಇಸ್ವಿಯಲ್ಲಿ ನಾನು ಸೆಕೆಂಡ್ ಹ್ಯಾಂಡ್ ವೆಹಿಕಲ್ ಖರೀದಿ ಮಾಡಿದ್ದು, ಅದರ ಖರೀದಿಗೆ ದೂರುದಾರರಿಂದ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ಈ ರೀತಿ ಬ್ಯಾಂಕ್ ನಿಂದ ಪಡೆದ ಸಾಲಕ್ಕೆ ಸಂಬಂದಪಟ್ಟ ದಾಖಲೆಗಳು ನನ್ನ ಬಳಿ ಇವೆ. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ, ನನ್ನ ಖಾತಾ ವಿವರಗಳಲ್ಲಿ ಹಲವಾರು ಚೆಕ್ ಗಳು ಬೌನ್ಸ್ ಆಗಿರುವ ಬಗ್ಗೆ ಹಾಗೂ ಕನಿಷ್ಟ ಬಾಕಿ ಖಾತೆಯಲ್ಲಿ ಮೆಂಟನ್

ಮಾಡದೆ ಇರುವ ಬಗ್ಗೆ ನಮೂದು ಇದೆ ಎಂದರೆ ಸರಿ. ನಾನು ಲ್ಯಾಂಡ್ ಲೂಸರ್ಸ್ ಗೆ ಸೆಲ್ಫ್ ಚೆಕ್ ಮುಖಾಂತರ ಹಣ ಪಾವತಿ ಮಾಡುತಿದ್ದೆ. ನನ್ನ ಖಾತೆಯಲ್ಲಿ ಲ್ಯಾಂಡ್ ಲೂಸರ್ಸ್ ಗೆ ಹಣ ಸಂದಾಯ ಮಾಡಬೇಕದ ಮೊತ್ತ ಪ್ರತ್ಯೇಕವಾಗಿ ಇರುತ್ತದೆ ಹಾಗೂ ಲ್ಯಾಂಡ್ ಲೂಸರ್ಸ್ ಬಳಿ ಬ್ಯಾಂಕ್ ಖಾತೆ ಇಲ್ಲದೆ ಇರುವುದರಿಂದ, ನನ್ನ ಖಾತೆಯಲ್ಲಿರುವ ಹಣವನ್ನು ಸೆಲ್ಫ್ ಚೆಕ್ ಮುಖಾಂತರ ಸದರಿ ಲ್ಯಾಂಡ್ ಲೂಸರ್ಸ್ ಗೆ ಹಣ ಕೊಡುತ್ತಿದ್ದೆ. ಲ್ಯಾಂಡ್ ಲೂಸರ್ಸ್ ಬಳಿ ಖಾತೆ ಇದ್ದರೆ ಮಾತ್ರ ವಾಹನ ಸಾಲ ಸಿಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲ್ಯಾಂಡ್ ಲೂಸರ್ಸ್ ಗೆ ತುರ್ತಾಗಿ ಹಣ ಪಾವತಿ ಮಾಡಬೇಕಾದ ಅವಶ್ಯಕತೆ ಇರುವುದರಿಂದ ನನಗೆ ಫ್ಯಾಕ್ಟರಿಯವರು ಪ್ರತಿ ಟನ್ ಗೆ ರೂ. 5 ಕಮೀಷನ್ ಕೊಡುತ್ತಾರೆ ಎಂದರೆ ಸರಿ. ಲ್ಯಾಂಡ್ ಲೂಸರ್ಸ ಗೆ ಹಣವನ್ನು ತುರ್ತಾಗಿ ಕೊಡಬೇಕಾದಂತ ಹಲವಾರು ಸಂದರ್ಭದಲ್ಲಿ ನಾನು ದೂರುದಾರರಿಂದ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ದೂರುದಾರರಿಂದ ಟಯರ್ ಹಾಗೂ ಪಡೆದ ಸಾಲವನ್ನು ನಾನು ಹಲವಾರು ಬಾರಿ ಸೆಲ್ಫ್ ಚೆಕ್ ಮುಖಾಂತರ ನಾನು ಮರು ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸೆಲ್ಫ್ ಚೆಕ್ ಗಳ ಹಿಂದೆ ಸಹಿ ಮಾಡಿ, ಅದರಲ್ಲಿ ಬರೆದಿರುವ ಮೊತ್ತವನ್ನು ವಿತ್ ಡ್ರಾ ಮಾಡಬೇಕು ಎಂದರೆ ಸರಿ. ಸದರಿ ದಾಖಲೆ ಬ್ಯಾಂಕ್ ನಲ್ಲಿ ಇರುತ್ತದೆ ಹಾಗೂ ಕೇಳಿದಾಗ ಕೊಡುತ್ತಾರೆ ಎಂದರೆ ಸಾಕ್ಷಿ ಸದರಿ ಬ್ಯಾಂಕ್ ಮಾರ್ಜ್ ಆದಾ ಕಾರಣ ಯಾವುದೇ ದಾಖಲೆಗಳನು ಕೊಡುತ್ತಿಲ್ಲ ಎಂದು ನುಡಿಯುತ್ತಾರೆ. ಚೆಕ್ ಬುಕ್ ನಲ್ಲಿ ಕೌಂಟರ್ ಫೈಲ್ ಇರುತ್ತದೆ ಹಾಗೂ ಅದರಲ್ಲಿ ಯಾರಿಗೆ ಯಾವ ಚೆಕ್ ಯಾವ ದಿನಾಂಕ ಕೊಟ್ಟಿರುತ್ತೇವೆ ಎಂಬ ಬಗ್ಗೆ ನಮೂದು ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಚೆಕ್ ಬೌನ್ಸ್ ಆಗಬಾರದ ಎಂಬ ಕಾರಣಕ್ಕೆ ಮೊದಲಿನಿಂದಲು ಹೊಂಚುಹಾಕಿ ದೂರುದಾರರಿಗೆ ಸೆಲ್ಫ್ ಚೆಕ್ಕನ್ನು ಕೊಡುತ್ತಿದ್ದೆ ಎಂದರೆ ಸರಿಯಲ್ಲ. ದೂರುದಾರರಿಂದ ಎಷ್ಟು ಪ್ರಮಾಣದ ಡಿಸೇಲ್ ಹಾಗೂ ಟಯರ್ ನ್ನು ಮತ್ತು ಸಾಲದ ಮರು ಪಾವತಿ ಬಗ್ಗೆ ಇರುವ ದಾಖಲೆಗಳು ನನ್ನ ಬಳಿ ಇಲ್ಲ. ನಾನು ದೂರುದಾರರಿಗೆ ಸಾಲದ ಮರು ಪಾವತಿ ಮಾಡಿದಾಗಲೆಲ್ಲ ರಶೀದಿಗಳನ್ನು ಪಡೆದಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ಬ್ಯಾಂಕ್ ಮುಖಾಂತರ ದೂರುದಾರರಿಗೆ ಮಾಡಿದ ಸಾಲದ ಮರು ಪಾವತಿಯ ರಶೀದಿಯನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಕಿರ್ಲೋಸ್ಕರ್ ಫ್ಯಾಕ್ಟರಿಯಿಂದ ವೆಸ್ಟ್ ಮಟಿರಿಯಲ್ ಗೋವಾಗೆ ಟ್ರಾನ್ಸಪೋರ್ಟ್ ಮಾಡುವಾಗ ಸಹ ನಾನು ದೂರುದಾರರಿಂದ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ಅಲ್ತಫ್ ಮೊಹಿನಿದ್ದಿನ್, ಸಚೀನ್ ಜಗತಾಪ್ ರವರಿಗೆ ಸಹ

ದೂರುದಾರರಿಂದ ಟಯರನ್ನು ಖರೀದಿ ಮಾಡಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಾವನ ಮಗ ಖಾಜಾ ಮೊಹಿನಿದ್ದಿನ್ ನನ್ನ ಬಳಿ ಕೆಲಸ ಮಾಡುವಾಗ ಅವರಿಗೆ ಸಹ ನಾನು ದೂರುದಾರರಿಂದ ಸಾಲ ಕೊಡಿಸಿದ್ದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ, ವ್ಯಕ್ತಿಗಳ ಅಲ್ತಫ್ ಮೊಹಿನಿದ್ದಿನ್, ಸಚೀನ್ ಜಗತಾಪ್, ಖಾಜಾ ಮೊಹಿನಿದ್ದಿನ್ ರವರ ಪರಿಚಯ ನನಗೆ ಇದೆ. ಖಾಜಾ ಮೊಹಿನಿದ್ದಿನ್ ನನ್ನ ಮಾವನ ಮಗ ಎಂದರೆ ಸರಿ. ನಾನು ದೂರುದಾರರಿಂದ ದಿನಾಂಕ 20-04-2009 ರಿಂದ 2014 ನೇ ಇಸ್ವಿಯವರೆಗೆ ಸಾಲವನ್ನು ಪಡೆದಿರುತ್ತೇನೆ. ಸಾಕ್ಷಿ ಮುಂದುವರೆದು ಸದರಿ ಸಾಲದ ಮರು ಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರ್ ಜೆ-13-ಜೆ-9834 ವಾಹನವನ್ನು 2008 ನೇ ಇಸ್ವಿಯಲ್ಲಿ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಇದನ್ನು ಖರೀದಿ ಮಾಡಲು ನಾನು ದೂರುದಾರರಿಂದ ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಾನು ಈ ಮೇಲೆ ಹೇಳಿದ ವ್ಯಕ್ತಿಗಳಿಗೆ ದೂರುದಾರರಿಂದ ಸಾಲ ಹಾಗೂ ಟಯರ್ ಕೊಡಿಸಿದ ಹಣವನ್ನು ಹಾಗೂ ನಾನು ದೂರುದಾರರಿಂದ ಟಯರ್ ಗಳನ್ನು ಖರೀದಿ ಮಾಡಿದ ಮೊತ್ತವನ್ನು ವಾಪಸ್ ಕೊಡಲು ದೂರುದಾರರಿಗೆ ಪಿಡಿಸಿದ್ದರಿಂದ ರೂ. 12,77,800/- ಬಾಕಿ ಮೊತ್ತ ಉಳಿಯಿತು ಎಂದರೆ ಸರಿಯಲ್ಲ. ಸದರಿ ರೂ. 12,77,800/- ಮೊತ್ತಕ್ಕೆ ವಾರ್ಷಿಕ ಅಂದಾಜು ರೂ. 3 ಲಕ್ಷ ಬಡ್ಡಿ ಮೊತ್ತ ಆದರು ಸಹ, ಸದರಿ ದೂರು ದಾಖಲಿಸುವ ಮುನ್ನ ನಾನು ಕೇವಲ ರೂ. 8 ಲಕ್ಷ ಬಡ್ಡಿ ಮೊತ್ತವನ್ನು ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಿಸಿ ನಂಃ 2367/2021 ರಲ್ಲಿ ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ದೂರುದಾರರಿಗೆ 8-10 ಚೆಕ್ ಗಳನ್ನು ಕೊಟ್ಟಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ಸಂಬಂದಪಟ್ಟ ದಾಖಲೆಗಳು ನನ್ನ ಬಳಿ ಇವೆ ಹಾಗೂ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ನಾನು ರೂ. 50 ಸಾವಿರ, ರೂ. 20 ಸಾವಿರ, ರೂ. 1,50,000/-, ರೂ. 1 ಲಕ್ಷ, ರೂ. 20 ಸಾವಿರ ಹಾಗೂ ಇತರೆ ಸಾಲಗಳನ್ನು ದೂರುದಾರರಿಂದ ಪಡೆದಿದ್ದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಇದರ ಕುರಿತು ದಾಖಲೆಗಳು ನಿಮ್ಮ ಬಳಿ ಇವೆಯೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. 2016 ನೇ ಇಸ್ವಿಯಲ್ಲಿ ದೂರುದಾರರು ಬೇರೆ ವ್ಯವಹಾರಗಳನ್ನು ಬಿಟ್ಟು ವಕೀಲ ವೃತ್ತಿ ಪ್ರಾರಂಭಿಸಿದ್ದಾಗಿನಿಂದ ದಿನಾಂಕ 20-03-2021 ರವರೆಗೆ ನಾನು ಮಾಡಬೇಕಾದ ಸಾಲದ ಮರು ಪಾವತಿಯನ್ನು ಕೇಳುತ್ತ ಬರುತ್ತಿದ್ದಾರೆ ಎಂದರೆ ಸರಿಯಲ್ಲ.

ದಿನಾಂಕ **20-03-2021** ರಂದು ರಾಜೀ ಮಾತುಕತೆ ನಡೆಸಿ, **12** ಚೆಕ್ ಕೊಟ್ಟು, ಬಾಕಿ ಮೊತ್ತವನ್ನು ಪಾವತಿ ಮಾಡುತ್ತೇನೆ ಎಂದು, ಲಿಖಿತವಾಗಿ ದೂರುದಾರರಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ನಿಪಿಃ **1** ಚೆಕ್ ನಲ್ಲಿ ಇರುವ ಸಹಿ ಮಾತ್ರ ನನ್ನ ಬರವಣಿಗೆಯಲ್ಲಿರುತ್ತದೆ. ಸಾಕ್ಷಿಗೆ ಸದರಿ ನಿಪಿಃ **1** ಚೆಕ್ ನ್ನು ತೋರಿಸಿ, ಅದರಲ್ಲಿರುವ ಬರವಣಿಗೆ ಅವರದ್ದೆ ಎಂದರೆ ಅವರು ಅದನ್ನು ಒಪ್ಪುತ್ತಾರೆ. ದೂರುದಾರರ **30** ಖಾತೆಗಳಿಗೆ ನಾನು ಹಣ ಪಾವತಿ ಮಾಡಿರುವ ದಾಖಲೆ ಇದೆ. ಅದನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ದಾಖಲೆಗಳನ್ನು ಓದಿದ ನಂತರ ಮಾತ್ರ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಜನವರಿ **2008** ರಿಂದ ಮಾರ್ಚ್ **2009** ರವರೆಗೆ **8** ಕಂತುಗಳಲ್ಲಿ ಒಟ್ಟು ರೂ. **12,77,800/-** ಸಾಲವನ್ನು ದೂರುದಾರರಿಂದ ಪಡೆದು, **8** ಪ್ರಾಮೀಸರಿ ಪತ್ರಗಳನ್ನು ಅವರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕ **04-04-2009** ರಂದು ಸದರಿ **8** ಪ್ರಾಮೀಸರಿ ಪತ್ರಗಳನ್ನು ವಾಪಸ್ ಪಡೆದು, ರೂ. **100/-** ರ ಬಾಂಡ್ ಪೇಪರ್ ನಲ್ಲಿ ಇದರ ಬಗ್ಗೆ ನಮೂದು ಮಾಡಿ ಕೊಟ್ಟಿದ್ದೆ ಎಂದರೆ ಸಾಕ್ಷಿ ನಾನು ದಿನಾಂಕ **20-04-2009** ರಂದು ನಾನು ಟ್ರಾನ್ಸ್ ಪೋರ್ಟ್ ವ್ಯವಹಾರ ಪ್ರಾರಂಭ ಮಾಡಿವಾಗ ಒಂದು ಪ್ರಾಮೀಸರಿ ಪತ್ರ, ಒಂದು ಬಿಳಿ ಹಾಳೆ ಹಾಗೂ ಎಸ್ ಬಿ ಎಮ್ ಬ್ಯಾಂಕ್ ನ ರೂ. **100/-** ಒಂದು ಬಾಂಡ್ ಪೇಪರ್ ದೂರುದಾರರಿಗೆ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಸದರಿ ಬಾಂಡ್ ಪೇಪರ್ ಮೇಲೆ ದಿನಾಂಕ **04-04-2009** ಎಂದು ನಮೂದು ಆಗಿತ್ತು ಎಂದರೆ ಸಾಕ್ಷಿ ಮೊದಲಿಗೆ ಈ ರೀತಿ ದಿನಾಂಕ ನಮೂದು ಆಗಿರಲಿಲ್ಲ ಎಂದು ನುಡಿದು, ನಂತರ ಬಾಂಡ್ ಪೇಪರ್ ನಲ್ಲಿ ಏನು ಬರೆದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಎಲ್ಲ ವಿಷಯಗಳನ್ನು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ನಿಪಿಃ **1** ಚೆಕ್ ನ್ನು ನನ್ನ ಕಚೇರಿಯ ಹಾಲ್ ನಲ್ಲಿರುವ ಟೇಬಲ್ ನ ಡ್ರಾವರ್ ನಲ್ಲಿ ನನ್ನ ಮಗನಿಗೆಂದು ಇಟ್ಟಿದ್ದೆ ಹಾಗೂ ನಾನು ಗೋವಾಗೆ ಟ್ರಾನ್ಸ್ ಪೋರ್ಟ್ ವ್ಯವಹಾರಕ್ಕೆಂದು ಹೋಗಿದ್ದೆ. ನಾನು ಆಗಾಗ ಗೋವಾಗೆ ವ್ಯವಹಾರಕ್ಕೆಂದು ಹೋಗಿ ಬರುತ್ತಿದ್ದೆ, ಹೀಗಾಗಿ ನಿಖರವಾಗಿ ದಿನಾಂಕ ಹೇಳಲಾಗುವುದಿಲ್ಲ. ಸದರಿ ಸೆಲ್ಫ್ ಚೆಕ್ಕನ್ನು ಲ್ಯಾಂಡ್ ಲೂಸರ್ಸ್ ಗೆ ಕೊಡಲು ಅದರಲ್ಲಿ ಮೊತ್ತವನ್ನು ನಮೂದು ಮಾಡಿ, ಹಾಗೂ ದಿನಾಂಕವನ್ನು ಸಹ ಬರೆದು ಇಟ್ಟಿದ್ದೆ. **2014** ನೇ ಇಸ್ವಿಯಲ್ಲಿ ಈ ರೀತಿ ಸೆಲ್ಫ್ ಚೆಕ್ ಗಳನ್ನು ಇಟ್ಟಿದ್ದೆ.

ಮನೆಯಲ್ಲಿ ಚೆಕ್ ನ್ನು ಹುಡುಕಿದಾಗ ಸಿಗಲಿಲ್ಲ, ನಂತರ ನನಗೆ ಚೆಕ್ ಕಳ್ಳತನ ಆಗಿದೆ ಎಂದು ತಿಳಿಯಿತು. ಸದರಿ ಚೆಕ್ ಗಳನ್ನು ಲ್ಯಾಂಡ್ ಲೂಸರ್ಸ್ ಗೆ ಕೊಡಲು ನಾನು ಇಟ್ಟಿದ್ದೆ. ಸಾಕ್ಷಿ ಮುಂದುವರೆದು, ಸದರಿ ಲ್ಯಾಂಡ್ ಲೂಸರ್ಸ್ ಗೆ ಬರೆಯಲು ಬರದ ಕಾರಣ ನಾನು ಸೆಲ್ಫ್ ಚೆಕ್ ಗಳನ್ನು ಕೊಡುತ್ತಿದ್ದೆ ಎಂದು ನುಡಿಯುತ್ತಾರೆ. ಲ್ಯಾಂಡ್ ಲೂಸರ್ಸ್ ಗೆ ಎಷ್ಟು ಹಣ ಪಾವತಿ ಮಾಡಬೇಕು ಎಂಬ ಬಗ್ಗೆ ನಾನು ಒಂದು ರಿಜಿಸ್ಟರ್ ಮೆಂಟೆನ್ ಮಾಡುತ್ತಿದ್ದೆ ಹಾಗೂ ಅದರಲ್ಲಿ ಹಣವನ್ನು ಕ್ಯಾಲ್ಕುಲೇಟ್ ಮಾಡಿ, ಅದರಂತೆ ಚೆಕ್ ಗಳಲ್ಲಿ ಮೊತ್ತ ನಮೂದು ಮಾಡಿ ಇಡುತ್ತಿದ್ದೆ. ಸದರಿ ರಿಜಿಸ್ಟರನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಬಲ್ಲೆ. ಸದರಿ ರಿಜಿಸ್ಟರ್ ನಲ್ಲಿ ಯಾರಿಗೆ ಎಷ್ಟು ಹಣ ಕೊಡಬೇಕು ಎಂಬ ಬಗ್ಗೆ ಮಾತ್ರ ನಮೂದು ಆಗಿದೆ, ಚೆಕ್ ಸಂಖ್ಯೆ ನಮೂದು ಆಗಿಲ್ಲ. ಯಾರಿಗೆ ಎಷ್ಟು ಮೊತ್ತ, ಯಾವ ಚೆಕ್ ಮುಖಾಂತರ ಹಣ ಪಾವತಿ ಮಾಡಲಾಗಿದೆ ಹಾಗೂ ಮಾಡಬೇಕು ಎಂಬ ಬಗ್ಗೆ ನನ್ನ ಬಳಿ ರಿಜಿಸ್ಟರ್ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

ಚೆಕ್ ಕಳೆದು ಹೋದಾ 20 ದಿನಗಳ ನಂತರ ದೂರುದಾರರೆ ನನಗೆ ಕರೆ ಮಾಡಿ, ನಾನು ರೂ. 12 ಲಕ್ಷ ಮೊತ್ತ ಕೊಡಬೇಕಾದ್ದರಿಂದ ಈ ಚೆಕ್ ತೆಗೆದುಕೊಂಡಿದ್ದೇನೆ ಎಂದು ಹೇಳಿದ್ದರು, ನಂತರ ನಾನು ಚಿತ್ತವಾಡಿಗಿ ಪೋಲಿಸ್ ಠಾಣೆಗೆ ದೂರು ಕೊಡಲು ಹೋಗಿದ್ದೆ, ಅಲ್ಲಿ ಪೋಲಿಸರು ಚೆಕ್ ಬೌನ್ಸ್ ಆಗಿದೆ, ನ್ಯಾಯಾಲದಲ್ಲಿ ಇತ್ಯರ್ಥ ಮಾಡಿಕೊಳ್ಳಿ ಎಂದು ಹೇಳಿದರು. ಸಾಕ್ಷಿ ಮುಂದುವರೆದು ನಾನು ಬ್ಯಾಂಕ್ ಗೆ ಸೆಲ್ಫ್ ಚೆಕ್ ಗಳನ್ನು ಮಾನ್ಯ ಮಾಡಬೇಡಿ ಎಂದು ನೋಟಿಸ್ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಹೀಗೆ ಬ್ಯಾಂಕ್ ಗೆ ನೀಡಿದ ನೋಟಿಸ್ ನನ್ನ ಬಳಿ ಇದೆ. ಸದರಿ ನೋಟಿಸ್ ನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿಪಿ 1 ಚೆಕ್ ಪೆಮೆಂಟ್ ಸ್ಟಾಪ್ಡ್ ಎಂಬ ಕಾರಣಕ್ಕೆ ಅಮಾನ್ಯಗೊಂಡಿಲ್ಲ ಎಂದರೆ ಸಾಕ್ಷಿ ಖಾತೆಯಲ್ಲಿ ಸಾಕಷ್ಟು ಮೊತ್ತ ಇಲ್ಲ ಎಂಬ ಕಾರಣಕ್ಕೆ ಅಮಾನ್ಯವಾಗಿದೆ ಎಂದು ನುಡಿಯುತ್ತಾರೆ. ಬ್ಯಾಂಕ್ ನಲ್ಲಿ ಪೇಮೆಂಟ್ ನಿಲ್ಲಿಸಲು ಸೂಚನೆ ನೀಡಿದರೆ, ಅದೇ ಕಾರಣಕ್ಕೆ ಚೆಕ್ಕನು ಅಮಾನ್ಯ ಮಾಡುತ್ತಾರೆ ಎಂದರೆ ಸರಿ.

ನಾನು ಗೋವಾಗೆ 2008 ರಿಂದ ಇಲ್ಲಿಯವರೆಗೆ ಎಷ್ಟು ಬಾರಿ ಹೋಗಿರುತ್ತೇನೆ ಎಂದು ನಿಖರವಾಗಿ ನೆನಪಿಲ್ಲ, ಆದರೆ ಪ್ರತಿ 15 ದಿನ ಅಥವಾ ತಿಂಗಳಿಗೆ ನಾನು ಅಲ್ಲಿಗೆ ಹೋಗುತ್ತಿದ್ದೆ. ನಾನು ಹೊಸಪೇಟೆಯಿಂದ ಲೋಂಡ ಜಂಕ್ಷನ್, ಬೆಳಗಾವಿ ಜಿಲ್ಲೆ ಹತ್ತಿರ ವರೆಗೆ ರೈಲ್ ನಲ್ಲಿ ಹೋಗಿ

ಅಲ್ಲಿಂದ, ಗೋವಾವರೆಗೆ ಬಸ್ ನಲ್ಲಿ ಹೋಗುತ್ತಿದ್ದೆ. ಸದರಿ ಬಸ್ ಟೀಕೆಟ್ ಹಾಗೂ ರೈಲ್ವೆ ಟೀಕೆಟ್ ಹಾಗೂ ಗೋವಾದಲ್ಲಿ ತಂಗಿದ್ದ ಹೋಟೆಲ್ ನ ಬಿಲ್ ಗಳನ್ನು ಇಟ್ಟುಕೊಂಡಿಲ್ಲ. ನಾನು ಎಂದಿಗೂ ಗೋವಾಗೆ ಹೋಗದೆ ಇದ್ದರು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ನನ್ನ ಹೆಂಡತಿ ಹಾಗೂ ಮಗಳು ಯಾವಗಲು ಇರುತ್ತಾರೆ. ಸದರಿಯವರು ಘರ್ದನಸಿನ್ ಹೆಣ್ಣುಮಕ್ಕಳಾಗಿರುತ್ತಾರೆ. ನಾನು ಇಲ್ಲದೆ ಇರುವಾಗ ನನ್ನ ಹೆಂಡತಿ ಹಾಗೂ ಮಗಳು ಬೇರೆಯವರನ್ನು ಮನೆಗೆ ಬಿಟ್ಟುಕೊಳ್ಳುವುದಿಲ್ಲ ಎಂದರೆ ಸಾಕ್ಷಿ ಕಚೇರಿಯಲ್ಲಿ ಕೂಡಲು ಹೇಳುತ್ತಾರೆ ಎಂದು ನುಡಿಯುತ್ತಾರೆ. ನಾನು ಊರಿನಲ್ಲಿ ಇರದೆ ಇರುವಾಗ, ನನ್ನ ಹೆಂಡತಿ ಹಾಗೂ ಮಗಳು ಬಂದವರಿಗೆ ಅದನ್ನೆ ಹೇಳಿ ಮನೆಯಿಂದ ಕಳುಹಿಸುತ್ತಾರೆ. ನಾನು ಚಿತ್ತವಾಡಿಗಿ ಪೋಲಿಸ್ ಠಾಣೆಯಲ್ಲಿ ಮೌಖಿಕವಾಗಿ ದೂರು ನೀಡಿರುತ್ತೇನೆ. ನಾನು ಟ್ರಾನ್ಸಪೋರ್ಟ್ ವ್ಯವಹಾರ ನಡೆಸುವುದರಿಂದ ನನಗೆ ಪೋಲಿಸರು ಹಾಗೂ ವಕೀಲರ ಸಂಪರ್ಕ ಇದೆ ಎಂದರೆ ಸರಿಯಲ್ಲ. ಪೋಲಿಸರು ಲಿಖಿತವಾಗಿ ದೂರು ಪಡೆಯದೆ ಇದ್ದಾಗ ನಾನು ಮಾನ್ಯ ಎಸ್ ಪಿ ಹಾಗೂ ಚಿತ್ತವಾಡಿಗಿ ಪೋಲಿಸ್ ಠಾಣೆಗೆ ಆರ್ ಪಿ ಎಡಿ ಮುಖಾಂತರ ದೂರು ಕಳುಹಿಸಲು ಪ್ರಯತ್ನಪಟ್ಟಿಲ್ಲ. ಈ ವಿಷಯವನ್ನು ನನ್ನ ವಕೀಲರಿಗೆ ಹೇಳಿಲ್ಲ. ದಿನಾಂಕ 20-03-2021 ರಂದು ನಾನು ದೂರುದಾರರ ಜೊತೆ ರಾಜೀ ಮಾತುಕತೆ ನಡೆಸಿ, ಒಂದು ಚೆಕ್ ಕೊಟ್ಟಿದ್ದರು ಸಹ, ಸಾಲದ ಮರುಪಾವತಿಯಿಂದ ತಪ್ಪಿಸಿಕೊಳ್ಳಲು ನಾನು ಗೋವಾಗೆ ಹೋಗಿದ್ದೆ, ಆಗ ದೂರುದಾರರು ಚೆಕ್ ನ್ನು ಕಳ್ಳತನ ಮಾಡಿರುತ್ತಾರೆ ಎಂದು ಸುಳ್ಳು ಕಥೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ರಿಪ್ಲೆ ನೋಟಿಸ್ ಗೆ ನಾನೇ ಮಾಹಿತಿ ನೀಡಿರುತ್ತೇನೆ. ಅದೇ ರೀತಿ ಈ ಪ್ರಕರಣ ನಡಸಲು ವಕೀಲರಿಗೆ ಸಹ ನಾನೇ ಮಾಹಿತಿ ನೀಡಿರುತ್ತೇನೆ. ಒಟ್ಟು ಎಷ್ಟು ಸಾಲದ ಮೊತ್ತ ಬಾಕಿ ಇದೆ ಎಂದರೆ ಸಾಕ್ಷಿ, 2013 ನೇ ಇಸ್ವಿಯ ಕೊನೆಯಲ್ಲಿ ನಾನು ಸಾಲದ ಪಾವತಿ ಮಾಡಿದ್ದೆ ಅದಕ್ಕೆ ದೂರುದಾರರು ಒಂದು ಪತ್ರ ಸಹ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದೂರುದಾರರ ಸಹೋದರ ಗುರು ಶರಣ್ ಸಿಂಗ್ ರವರು ನನ್ನ ಮತ್ತು ಅಲ್ತಫ್ ಮೋದಿನ್ ರವರ ವಿರುದ್ಧ ಒಂದು ದೂರು ಕೊಟ್ಟಿದ್ದು, ಅದರ ಗುನ್ನೆ ಸಂಖ್ಯೆ 10/2022 ಆಗಿದ್ದು, ಸದರಿ ಪ್ರಕರಣ ಹೊಸಪೇಟೆಯ ಬಡಾವಣೆ ಪೋಲಿಸ್ ಠಾಣೆಯಲ್ಲಿ ದಾಖಲಾಗಿದ್ದು, ಅದರಲ್ಲಿ ನಾನು ಹೇಳಿಕೆ

ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ತೋರಿಸಿದಾಗ ಅವರು ಅದನ್ನು ಒಪ್ಪಿಲ್ಲ. ಸದರಿ ಪ್ರಕರಣದಲ್ಲಿ ನಾನು ನೀರಿಕ್ಷಾಣ ಜಾಮೀನು ಪಡೆದಿದ್ದೆ. ನಿಪಿಃ 1 ಚೆಕ್ ನಲ್ಲಿರುವ ಸಹಿ ಹಾಗೂ ಪೋಲಿಸ್ ಠಾಣೆಯಲ್ಲಿ ನಾನು ನೀಡಿದ ಹೇಳಿಕೆಯಲ್ಲಿರುವ ಸಹಿ ಎರಡು ಒಂದೆ ಎಂದರೆ ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ನಿಪಿಃ 1 ಚೆಕ್ ನಲ್ಲಿರುವ ಸಹಿ ಅವರದ್ದು ಹಾಗೂ ಹೇಳಿಕೆಯಲ್ಲಿರುವ ಸಹಿ ಅವರದ್ದಲ್ಲ ಎಂದು ನುಡಿಯುತ್ತಾರೆ. ಪೋಲಿಸರು ನನ್ನ ವಿರುದ್ದ ದೂರು ದಾಖಲಾಗಿದೆ ಎಂದು ಹೇಳಿದ ನಂತರ ನಾನು ನೀರಿಕ್ಷಾಣ ಜಾಮೀನು ಪಡೆದಿರುತ್ತೇನೆ ಎಂದರೆ ಸರಿ. ಅಲ್ಲಿ ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ, ಆದರೆ ಅಲ್ತಫ್ ರವರ ಹೇಳಿಕೆ ಪಡೆದಿದ್ದರು. ದೂರುದಾರರು ಹ್ಯಾಪಿ ಮೋಟಾರ್ಸ್, ಹೊಸಲಿಂಗಪುರ, ಹಿಮಲಯ ಮೊಟಾರ್ಸ್, ಹೈದಾರಾಬಾದ್ ಆಟೋ ಮೋಬೈಲ್ಸ್, ಹ್ಯಾಪಿ ಮೋಟಾರ್ಸ್ ಹಂಪಿ, ಹೊಸಪೇಟೆ ನಡೆಸುತ್ತಾರೆ ಎಂದರೆ ಸಾಕ್ಷಿ ಸದರಿ ಎಲ್ಲ ಕಂಪನಿಗಳು ಅಂದಾಜು 1997-1998 ರಂದು ಮುಚ್ಚಲಾಗಿದೆ ಎಂದು ನುಡಿಯುತ್ತಾರೆ. ನಾನು 2007 ನೇ ಇಸ್ವಿಯಲ್ಲಿ ರಾಜಶ್ರೀ ಅಟೋ ಮೊಬೈಲ್ ನಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ಅಂಗಡಿ ಪಕ್ಕ ಹ್ಯಾಪಿ ಮೋಟಾರ್ಸ್ ಇತ್ತು ಎಂದರೆ ಸರಿ. ದೂರುದಾರರು, ಗೋಪಾಲ್ ಕೃಷ್ಣ ಹಾಗೂ ಸದರಿ ವರ ಫರ್ಮ್ ನಡುವೆ, ಆದಾ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರಿಗೆ ರೂ. 9 ಲಕ್ಷ ಸಾಲದ ಮರು ಪಾವತಿ ಮಾಡಬೇಕು ಎಂದು ದೂರುದಾರರು ನೋಟಿಸ್ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ನ್ಯೂತಾಜ್ ಆಟೋ ಮೊಬೈಲ್ಸ್ ನಲ್ಲಿ ದೂರುದಾರರು ಮಾಡಿದ ಇನ್ವೆಸ್ಟ್ ಮೆಂಟ್ ಬಗ್ಗೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ದೂರುದಾರರ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.